**ಶಾಲೆಯ ಹೆಸರು:**

೧೦ನೇ ತರಗತಿ * ಸಂಕಲನಾತ್ಮಕ ಪರೀಕ್ಷೆ-೧, ೨೦೧೭-೧೮ * **ಪ್ರಥಮ ಭಾಷೆ-ಕನ್ನಡ** * ಅವಧಿ-೩ ಗಂಟೆ * ಗ.ಅಂಕ-೧೦೦

**ಭಾಗ – 'ಎ' (ಗದ್ಯ, ಪದ್ಯ, ಪಠ್ಯಪೋಷಕ ಅಧ್ಯಯನ)**

**ಅ] ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** ೯ X ೧ = ೯

೧. ರಾಹಿಲನು ಯಾರು?
೨. ಶ್ರೀರಾಮನ ತಂದೆಯ ಹೆಸರೇನು?
೩. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
೪. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು?
೫. ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು?
೬. ಕಾಡುಮೇಡುಗಳ ಸ್ಥಿತಿ ಹೇಗಿದೆ?
೭. ಹಲಗಲಿಯ ನಾಲ್ವರು ಪ್ರಮುಖರು ಯಾರು?
೮. ಕುಂಪಣಿ ಸರಕಾರ ಹೊರಡಿಸಿದ ಆದೇಶವೇನು?
೯. ವಿವೇಕಾನಂದರನ್ನು 'ಮಾನವತಾ ಮಿತ್ರ' ಎಂದು ಕರೆದವರಾರು?

**ಆ] ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯದಲ್ಲಿ ಉತ್ತರಿಸಿ.** ೧೦ X ೨ = ೨೦

೧೦. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?
೧೧. ಯಾರು ಯಾರಿಗೆ ವಸಂತ ಮುಖತೋರಲಿಲ್ಲ?
೧೨. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?
೧೩. ಹಲಗಲಿ ಬೇಡರು ದಂಗೆ ಏಳಲು ಕಾರಣವೇನು?
೧೪. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?
೧೫. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?
೧೬. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?
೧೭. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?
೧೮. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?
೧೯. 'ವಸಂತ ಮುಖತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

**ಇ] ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯವನ್ನು ವಿವರಿಸಿ.** ೪ X ೩ = ೧೨

೨೦. "ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!"
೨೨. "ರೂಪಿನಂತೆ ಮಾತುಕೂಡ ಎನಿತುದಾರವಾಗಿದೆ"
೨೧. "ಜೀವ ಸತ್ತುಹೋಗುವುದು ಗೊತ್ತ"
೨೩. "ಬಾಯ್ದಂಬುಲಕೆ ಕೈಯಾನುವರೆ"

**ಈ] ಈ ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ಪರಿಚಯಿಸಿ :–** ೨೪. ವಿ.ಕೃ.ಗೋಕಾಕ್ ೨೫. ದ.ರಾ. ಬೇಂದ್ರೆ ೨ X ೩ = ೬

**ಉ] ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ.** ೧ X ೪ = ೪

೨೬. ನೀಲಮೇಘ ಮಂಡಲ............ ............ ............ ............ನೋಡಿದಿರಾ?

***ಅಥವಾ***

ಯುಗಯುಗಗಳ............ ............ ............ ............ನೋಡಿದಿರಾ?

**ಊ] ಪದ್ಯವನ್ನು ಓದಿ ಅರ್ಥೈಸಿಕೊಂಡು, ಇದರಲ್ಲಿ ಅಡಕಗೊಂಡಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.** ೧ X ೪ = ೪

೨೭. ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ ॥ ೮ ॥

**ಋ] ೨೮. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.** ೨ + ೨ = ೪

ರಾಮಕೃಷ್ಣ ಪರಮಹಂಸರು ಪರಮದೈವಭಕ್ತ. ಯಾವಾಗಲೂ ದೇವರನ್ನು ಕುರಿತು ಚಿಂತಿಸುತ್ತಿದ್ದರು. ಅವರಿಗೆ ಎಲ್ಲರಲ್ಲಿಯೂ ದೇವರ ಭಾವನೆಯಿತ್ತು. ಅವರು ಸಾಧಾರಣ ಗುರುಗಳಲ್ಲ. ದೇವರನ್ನು ನೋಡುವ ಶಕ್ತಿಯ ಮಟ್ಟದಲ್ಲಿರುವ ಗುರುಗಳು. ಧ್ಯಾನ ಮಾಡುವಾಗಲೆಲ್ಲಾ ದೇವರ ಜೊತೆ ಮಾತನಾಡುತ್ತಾ ಕಾಲ ಕಳೆಯುತ್ತಿದ್ದರು ಎಂದು ಅವರ ಶಿಷ್ಯರು ಹೇಳುತ್ತಿದ್ದರು. ಅವರು ಹೇಳುತ್ತಿದ್ದರು "ಮುಗ್ಧ ಮನಸ್ಸುಳ್ಳವರು ದೊಡ್ಡ ಜ್ಞಾನಿಗಳಾಗುವರು". ಅವರ ಮನಸ್ಸನ್ನು ನಾವು ಅರ್ಥ ಮಾಡಿಕೊಂಡರೆ ಅವರೆಷ್ಟು ಮಹಾತ್ಮರೆಂದು ಗೊತ್ತಾಗುವುದು. ಅವರು ಎಲ್ಲಾ ಧರ್ಮಗಳನ್ನು ಹಾಗೂ ದೇವರನ್ನು ಗೌರವದಿಂದ ನೋಡುತ್ತಿದ್ದರು. ರಾಮಕೃಷ್ಣರು ತಮ್ಮ ಪತ್ನಿ ಶಾರದಾದೇವಿಯವರನ್ನು ತಾಯಿಯ ಭಾವನೆಯಿಂದ ನೋಡುತ್ತಿದ್ದರು. ಅವರು ಶಾರದಾದೇವಿಯವರನ್ನು ತಾಯಿ-ಮಗು ಭಾವನೆಯಿಂದ ನೋಡುತ್ತಿದ್ದರು. ಶಾರದಾದೇವಿಯವರಿಗೆ ಆರೋಗ್ಯ ಸರಿ ಇಲ್ಲದಿರುವಾಗ ಮಹಿಳೆಯರನ್ನು ಕಳುಹಿಸಿ ಶುಶ್ರೂಷೆ ಮಾಡಿಸುತ್ತಿದ್ದರು. ಶಾರದಾಮಾತೆಗೆ ಒಂದು ಚೂರು ನೋವಾಗದಂತೆ ಹೂವಿನ ತರಹ ನೋಡಿಕೊಳ್ಳುತ್ತಿದ್ದರು. ಅವರ ಗುಣಗಳು, ಆದರ್ಶಗಳು ತುಂಬಾ ಅದ್ಭುತ. ಅವರಿಂದಲೇ ವಿವೇಕಾನಂದ ಜಗತ್ತಿನಲ್ಲಿ ಮಹಾನ್ ವ್ಯಕ್ತಿಯಾಗಿದ್ದು.

ಪ್ರಶ್ನೆಗಳು:– ೧) ರಾಮಕೃಷ್ಣ ಪರಮಹಂಸರ ದೈವಭಕ್ತಿಯ ಬಗ್ಗೆ ವಿವರಿಸಿ.
೨) ಪರಮಹಂಸರು ಶಾರದಾದೇವಿಯವರ ಮೇಲೆ ಹೇಗೆ ಕಾಳಜಿ ವಹಿಸುತ್ತಿದ್ದರು?

*[ಪು.ತಿ.ನೋ.....*

ಎ] ಕೆಳಗಿನ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ. ೨ X ೪ = ೮

೨೯. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?

***ಅಥವಾ***

ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶವರಯ್ಯ ಅವರು ಸಲ್ಲಿಸಿದ ಕೊಡುಗೆಗಳನ್ನು ತಿಳಿಸಿ.

೩೦. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂದು ಕವಿ ಶಿವರುದ್ರಪ್ಪನವರು ಆಶಿಸಿದ್ದಾರೆ? ವಿವರಿಸಿ.

***ಅಥವಾ***

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

## ಭಾಗ– 'ಬಿ' (ವ್ಯಾಕರಣ, ಅಲಂಕಾರ, ಛಂದಸ್ಸು)

**ಏ] <u>ಪ್ರತಿ ಪ್ರಶ್ನೆಗೂ ಕೊಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯುತ್ತರವನ್ನು ಆರಿಸಿ ಬರೆಯಿರಿ.</u>** ೧೦ X ೧ = ೧೦

೩೧. ಕನ್ನಡ ವರ್ಣಮಾಲೆಯಲ್ಲಿರುವ ಅಲ್ಪಪ್ರಾಣಾಕ್ಷರಗಳ ಸಂಖ್ಯೆ......... [ಅ)೦೫ ಆ)೨೫ ಇ)೧೯ ಈ)೧೦]

೩೨. ಇಲ್ಲಿರುವ ಪದಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರ ಹೊಂದಿರುವ ಪದ.... [ಅ)ಜನ್ನ ಆ)ಅಮ್ಮ ಇ)ಉಷ್ಣ ಈ)ಹತ್ತಿರ]

೩೩. **'ಚೆನ್ನಾಗಿ'** ಇದು..........ಅವ್ಯಯ. [ಅ)ಕ್ರಿಯಾರ್ಥಕಾವ್ಯಯ ಆ)ಸಾಮಾನ್ಯಾವ್ಯಯ ಇ)ಸಂಬಂಧಾರ್ಥಕಾವ್ಯಯ ಈ)ಅನುಕರಣಾವ್ಯಯ]

೩೪. ಹರ್ಷ, ಆಶ್ಚರ್ಯ, ಸಂತೋಷ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ ಬಳಸುವ ಲೇಖನ ಚಿಹ್ನೆ............
[ಅ)ಭಾವಸೂಚಕ ಚಿಹ್ನೆ ಆ)ವಿವರಣಾಚಿಹ್ನೆ ಇ)ಉದ್ಧರಣಚಿಹ್ನೆ ಈ)ವಿವರಣಾಚಿಹ್ನೆ]

೩೫. **'ವಿಶ್ವೇಶ್ವರಯ್ಯ ಅವರು ಕೈಗಾರಿಕೆಗಳಿಗೆ ಪ್ರಾಶಸ್ತ್ಯ ನೀಡಿದರು'** ಈ ವಾಕ್ಯವು ಹೊಂದಿರುವ ಕಾಲ............
[ಅ)ನಿರಂತರಕಾಲ ಆ)ವರ್ತಮಾನ ಇ)ಭವಿಷತ್ ಈ)ಭೂತ]

೩೬. **'ಅನ್ವಯ'** ಪದದ ಸಮಾನಾರ್ಥಕ ಪದ......... [ಅ) ಅಭಿಪ್ರಾಯ ಆ) ಅನ್ನುವುದು ಇ) ವಂಶ ಈ) ಮಹತ್ವ]

೩೭. ಇವುಗಳಲ್ಲಿ ದ್ವಿರುಕ್ತಿ ಪದ......... [ಅ) ಹೊಟ್ಟೆಕಿಚ್ಚು ಆ) ಥಳಥಳ ಇ) ದನಕರು ಈ) ನಟ್ಟನಡುವೆ]

೩೮. ಕೊಟ್ಟಿರುವ ಪದಗಳಲ್ಲಿ ಅಚ್ಚಗನ್ನಡದ ಪದ........ [ಅ) ಡಿಪ್ಲೋಮಾ ಆ) ಕಾರ್ಖಾನೆ ಇ) ತಲೆ ಈ) ದರ್ಬಾರು]

೩೯. **'ಮೋಸಮಾಡು'** ಇದು ............ ಸಮಾಸಕ್ಕೆ ಉದಾಹರಣೆಯಾಗಿದೆ. [ಅ) ತತ್ಪುರುಷ ಆ) ಕ್ರಿಯಾ ಇ) ಅಂಶಿ ಈ) ದ್ವಿಗು]

೪೦. **'ಹಲಗಲಿ ಬೇಡರು ಬ್ರಿಟಿಷ್ ಸೈನ್ಯದೊಡನೆ ಹೋರಾಡಿದರು ಆದರೆ ಗೆಲ್ಲಲು ಸಾಧ್ಯವಾಗಲಿಲ್ಲ'** ಇದು..........ವಾಕ್ಯವಾಗಿದೆ.
[ಅ) ಸಂಯೋಜಿತ ಆ) ಸರಳ ಇ)ಸಾಮಾನ್ಯ ಈ) ಮಿಶ್ರ]

**ಐ] ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಉತ್ತರವನ್ನು ಬರೆಯಿರಿ.** ೪ X ೧ = ೪

೪೧. ದೇವೇಂದ್ರ : ದೇವ+ಇಂದ್ರ : : ಅತ್ಯಾದರ : ................

೪೨. ಓಣಿಯಲ್ಲಿ : ಆಗಮಸಂಧಿ : : ಒಮ್ಮೊಮ್ಮೆ : ................

೪೩. ಕಾರ್ಯ : ಕಜ್ಜ : : ವಂಶ : ..............

೪೪. ಆಯುಧವನ್ನು : ದ್ವಿತೀಯಾ ವಿಭಕ್ತಿ : : ಊರಿಗೆ : ................

**ಒ] ಕೆಳಗಿನ ಪದ್ಯಭಾಗವನ್ನು ಬರೆದುಕೊಂಡು, ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ** ೧ X ೩ = ೩

೪೫.
ಏನು ಹೇಳ್ವೆ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ

***ಅಥವಾ***

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು

**ಓ] ಕೆಳಗಿನ *ಯಾವುದಾದರು ಒಂದು* ಸಾಲಿನಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಗೊಳಿಸಿರಿ.** ೧ X ೩ = ೩

೪೬. "ಒಳಗಿನ ಮಂದಿ ಗುಂಡು ಹೊಡಿದರೂ ಮುಂಗಾರಿ ಸಿಡಿಲ ಸಿಡಿದ್ಹಾಂಗ"

***ಅಥವಾ***

"ಮಾರಿಗೌತಣವಾಯ್ತು ನಾಳಿನ ಭಾರತವು"

## ಭಾಗ – 'ಸಿ' (ವಾಕ್ಯರಚನೆ)

**ಔ] ಕೆಳಗಿನ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಕುರಿತು ವಿಸ್ತರಿಸಿ ಬರೆಯಿರಿ:–** ೧ X ೩ = ೩

೪೭. ಅ) ತಾಳಿದವನು ಬಾಳಿಯಾನು ಆ) ಕೈಕೆಸರಾದರೆ ಬಾಯಿ ಮೊಸರು ಇ) ಕೂಡಿ ಬಾಳಿದರೆ ಸ್ವರ್ಗ ಸುಖ

**ಅಂ] ೪೮. ನೀವು ಸರ್ಕಾರಿ ಪ್ರೌಢಶಾಲೆ, ಹೊಳೆನರಸೀಪುರ. ಈ ಶಾಲೆಯ 'ರೇಣುಕ' ಎಂದು ಭಾವಿಸಿ,** ೧ X ೫ = ೫

ಅ) ನಿಮ್ಮ ಊರಿನ ಚರಂಡಿಗಳನ್ನು ದುರಸ್ತಿ ಮಾಡಿಸಬೇಕೆಂದು ಗ್ರಾಮಪಂಚಾಯಿತಿ ಅಧ್ಯಕ್ಷರಿಗೆ ಒಂದು ಪತ್ರ ಬರೆಯಿರಿ.

***ಅಥವಾ***

ಆ) ನಿಮ್ಮ ಹುಟ್ಟು ಹಬ್ಬಕ್ಕೆ ಆಗಮಿಸಬೇಕೆಂದು ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರ ಬರೆಯಿರಿ.

**ಅಃ] ಕೆಳಗಿನ ವಿಷಯಗಳಲ್ಲಿ ಒಂದನ್ನು ಕುರಿತು ಒಂದು ಪುಟಕ್ಕೆ ಮೀರದಂತೆ ಪ್ರಬಂಧ ಬರೆಯಿರಿ.** ೧ X ೫ = ೫

೪೯. ಅ) ಗ್ರಂಥಾಲಯಗಳ ಮಹತ್ವ
ಆ) ಸ್ವಚ್ಛಭಾರತ ಅಭಿಯಾನ
ಇ) ವರದಕ್ಷಿಣೆ: ಒಂದು ಸಾಮಾಜಿಕ ಪಿಡುಗು